ಊರೂರು ಸುತ್ತೋ ನನ್ನ ಯಾರು ಕಟ್ಕೋತಾರೆ. ಇವತ್ತಿಲ್ಲಿ, ನಾಳೆ ಭೋಪಾಲ್ ಹೀಗೆ ನಮ್ಮ ಕತೆ! ಮೆಚ್ಚುಗೆಯೇನೋ ಎಲ್ರೂ ಕೊಡ್ತಾರೆ. ಯಾರೂ ಜೊತೆಯಾಗಲ್ಲ' ಎಂದು ಕೇತಕಿಯ ಮುಖ ನೋಡಿದ. ಕೇತಕಿಯೂ ನಕ್ಕು ಸುಮ್ಮನಾದಳು. ಓಹ್! ಇನ್ನಿಗೆ ಮದ್ವೆನೂ ಆಗಿಲ್ಲ. ಅನುಕಂಪನೂ ಸೇರಿತು. ಯಾಕೆ ಅನುಕಂಪ! ಅರ್ಥವಾಗಲಿಲ್ಲ. ಏನೋ ತಲ್ಲಣ, ಬೇಕುಬೇಡಗಳ ಮೇಲೋಗರ! ಊಟ ಮುಗಿಸಿ ಗುಡ್‌ನೈಟ್ ಎಂದು ಹೊರಟಾಗ ಮುಕುಂದ್ ಜೋಶಿಯ ಕಣ್ಣ ತುಂಬ ಯಾಚನೆ ತುಂಬಿ, 'ಸ್ವಲ್ಪ ಹೊತ್ತು ಮಾತಾಡಿ ಹೋಗ್ರಿ, ಮತ್ಯಾವಾಗ ಸಿಗ್ತಿವೋ ಏನೋ' ಎಂದಾಗ 'ಮಹರಾಯ ನಿನ್ನತ್ರ ಮಾತಾಡಿದ್ರೆ ನನ್ನ ಕತೆ ಮುಗೀತು' ಎಂದು ಮನದಲ್ಲೇ ಅಂದುಕೊಂಡು 'ಮನೆಗೆ ಫೋನ್ ಮಾಡ್ಬೇಕು' ಎಂದು ಹೇಳಿ ಹೊರಟಾಗ ಜೋಶಿ ಮುಖದಲ್ಲಿ ಸಂಕಟ ಕಂಡಿತು. ಸರಸರನೆ ರೂಮು ಸೇರಿ ಬಾಗಿಲು ಹಾಕ್ಕೊಂಡು ಕೂತಳು. ಗಂಡನಿಗೆ ಕರೆ ಮಾಡಿದಳು. ಎಂಗೇಜ್ ಟೋನ್! ಥೂ ಯಾವಾಗ್ಲೂ ಇವ್ನ ಫೋನು ಎಂಗೇಜ್. ನನ್ನ ಈ ಸುಳಿಯಿಂದ, ಈ ಕ್ಷಣದ ಚಂಚಲತೆಯಿಂದ ಪಾರು ಮಾಡೋ ಅಂತ ಕಾಲ್ ಮಾಡಿದರೆ ಇವ್ನೊಬ್ಬ ಯಾರತ್ರನೋ ಹರಟೆ ಹೊಡಿತಿರಬೇಕು' ಎಂದುಕೊಂಡು ಮತ್ತೆ ಪ್ರಯತ್ನಿಸಿದಳು. ಅಬ್ಬಾ! ರಿಂಗ್ ಆದೊಡನೇ, ಹಲೋ ಕೂಡಾ ಹೇಳುವ ಸಂಯಮ ತೋರದೇ, 'ಯಾರತ್ರ ಅಷ್ಟು ಮಾತು'.

> ಸೆಮಿನಾರು ಮುಗಿಸಿ ರೂಮಿಗೆ ಬಂದು ಮಂಚದ ಮೇಲೆ ಬಿದ್ದುಕೊಂಡಳು. ಪದೇ ಪದೇ ತನ್ನತ್ತ ನೋಡಿ ಮಾತಾಡುತ್ತಿದ್ದ ಮುಕುಂದ್ ಜೋಶಿಯ ಮೆಚ್ಚುಗೆಯ ಕಣ್ಣು ನಿಧಾನಕ್ಕೆ ಆಳವಾಗಿ ತನ್ನೊಳಗೆ ಇಳಿಯುತ್ತಿದೆ ಎನಿಸಿತು.

'ಏಯ್... ರಿಲಾಕ್ಸ್ ಸುಂದರಿ, ಏನೇ ಹೊಸ ಮದ್ವೆ ಆದವ್ರ ಥರ ಫೋನ್ ಮೇಲೆ ಫೋನ್ ಮಾಡ್ತಿದ್ದೀಯಾ! ಯಾಕೆ ರೂಮಲ್ಲಿ ಒಬ್ಬಳೇ ಭಯವೇನೆ?'

'ಏಂಥದ್ದೂ ಇಲ್ಲ. ಸುಮ್ನೆ ನೆನಪಾಯ್ತು. ನೀನ್ ನೋಡು ಎಷ್ಟು ಆರಾಮಾಗಿದ್ದಿ. ನಂಗೇ ಎಲ್ಲಾ, ನೆನಪು, ಸಂಸಾರ ಎಲ್ಲ' ಎಂದಳು ತನ್ನ ಬೇಗುದಿ ಬಚ್ಚಿಡಲು ಯತ್ನಿಸುತ್ತಾ,

'ಹ್ಮ್ಂ... ನನ್ನಾಸೆ ಆಯ್ತೇನೆ?...'

'ಹುಂ, ಮತ್ತೆ. ಆಯ್ತು. ಏನೀವಾಗ!'

'ಅಯ್ಯಯ್ಯೋ! ಏನ್ಮಾಡೋದು ಈಗ, ಹೋಗ್ಲಿ ಒಂದು ಮುತ್ ಕೊಡ್ಲಾ.'

'ಒಂದೆಲ್ಲಿ ಸಾಲುತ್ತೆ, ಜುಗ್ಗ...'

'ಹುಂ, ನಾಳೆ ಬರ್ತಿಯಲ್ಲಾ, ಲೆಕ್ಕ ಚುಕ್ತಾ ಮಾಡ್ತೀನಿ, ನಾಳೆ ಎಷ್ಟು ಗಂಟೆಗೆ ಫ್ಲೈಟ್?'

'ಹನ್ನೊಂದು. ಎರಡು, ಎರಡೂವರೆಗೆಲ್ಲ ಬೆಂಗಳೂರು ತಲುಪ್ತೀನಿ.'

'ಹುಂ, ಏರ್‌ಪೋರ್ಟ್‌ಗೆ ಬರ್ತೀನಿ ಬಿಡು. ಅಲ್ಲೇ ಕಾರಲ್ಲೇ ನಿನ್ನ ಮುದ್ದು ಮಾಡಿ ಹೊತ್ತುಕೊಂಡು ಬರ್ತೀನಿ, ಸರಿನಾ!'

'ಸರಿ, ಬಾಯ್.'

ಫೋನು ಬಿಸಾಕಿ ಬ್ಯಾಗನ್ನು ಪ್ಯಾಕ್ ಮಾಡತೊಡಗಿದಳು. ಯಾವತ್ತಾದರೂ ಹೀಗಾಗಿತ್ತಾ, ಅಷ್ಟಕ್ಕೂ ಇಷ್ಟ ಪಟ್ಟರೆ ಅದ್ರಲ್ಲೇನು ತಪ್ಪು ಅಂದುಕೊಂಡರೂ, ಅವನ ಕಣ್ಣಿನ ಯಾಚನೆ ಹೆದರಿಕೆ